## ಮದ್ದೂರು ತಾಲ್ಲೂಕಿನ ಹೆಮ್ಮನಹಳ್ಳಿಯಲ್ಲಿ ದಲಿತ ಯುವಕನ ಮೇಲೆ ಸವರ್ಣೀಯರಿಂದ ನಡೆದ ಜಾತಿ ದೌರ್ಜನ್ಯ ಕುರಿತು ಸತ್ಯಶೋಧಾನ ವರದಿ.

ಹೆಮ್ಮನಹಳ್ಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆಯಲ್ಲಿ, ದಲಿತ ಯುವಕನಾದ ಶ್ರೀ ಕೆಂಪರಾಜು ಬಿನ್ ಅಪ್ಪಾಜಿ ಎಂಬುವವರ ಮೇಲೆ ಜಾತಿ ದೌರ್ಜನ್ಯ ನಡೆದಿರುವ ಬಗ್ಗೆ, 'ದಿ ಹಿಂದೂ' ಇಂಗ್ಲೀಷ್ ವಾರ್ತಾ ಪತ್ರಿಕೆ ದಿನಾಂಕ : 30/3/2012 ರಂದು ವರದಿಮಾಡಿತ್ತು. ಈ ವರದಿಯನ್ನು ಆಧಾರವಾಗಿಟ್ಟುಕೊಂಡು ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಕರ್ನಾಟಕ), ಸ್ವಾಭೀಮಾನ ದಲಿತ ಶಕ್ತಿ, ಮತ್ತು ಪರ್ಯಾಯ ಕಾನೂನು ವೇದಿಕೆಯವರ ಸಂಯುಕ್ತಾಶ್ರಯದಲ್ಲಿ ಸತ್ಯಶೋಧನೆಗಾಗಿ ರಾಮ್‌ದಾಸ್ ರಾವ್, ಶಿವಲಿಂಗಮ್, ಇವೇಂಜಿಲಿನ್ ಮತ್ತು ರಘುಪತಿ.ಎಸ್ ರವರನ್ನೊಳಗೊಂಡಂತೆ ಒಂದು ಸತ್ಯಶೋಧನಾ ತಂಡವನ್ನು ರಚಿಸಿದರು.

ಮೇಲ್ಕಂಡ ತಂಡವು ಸದರಿ ಘಟನೆಯ ಸತ್ಯಶೋಧನೆಗಾಗಿ ದಿನಾಂಕ : 10/04/2012 ರಂದು ಹೆಮ್ಮನಹಳ್ಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ಇಲ್ಲಿಗೆ, ಭೇಟಿ ನೀಡಿ ಸದರಿ ಘಟನೆಗೆ ಸಂಬಂಧಿಸಿ ಪ್ರತ್ಯಕ್ಷ ದರ್ಶಿಗಳು, ಆರೋಪಿತರು, ಗ್ರಾಮಸ್ಥರು ಮತ್ತು ಜಿಲ್ಲಾಡಳಿತ ದವರನ್ನು ಸಂದರ್ಶಿಸಿ ಈ ಸತ್ಯಶೋಧನಾ ವರದಿಯನ್ನು ತಯಾರಿಸಲಾಗಿದೆ.

### ಪ್ರಕರಣದ ವಸ್ತುಸ್ಥಿತಿ :

ಈ ಘಟನೆಯನ್ನು ಪ್ರತ್ಯಕ್ಷದರ್ಶಿಯಾದ ದಿನಕರ್ ರವರು ನಮ್ಮ ಮುಂದೆ ತಿಳಿಸಿದ್ದಾರೆ.

ದಿನಾಂಕ: 15/3/2012 ರಂದು ಮದ್ದೂರು ತಾಲ್ಲೂಕಿನ ಹೆಮ್ಮನಹಳ್ಳಿಯಲ್ಲಿ ಶ್ರೀ ಚೌಡೇಶ್ವರಿಯಮ್ಮನವರ ವಾರ್ಷಿಕ ಜಾತ್ರಮಹೋತ್ಸವ ನಡೆಯುತ್ತಿದ್ದಂತಹ ಸಂದರ್ಭದಲ್ಲಿ , ಸದರಿ ಜಾತ್ರೆಯ ಸಂಪ್ರದಾಯದಂತೆ, ಹೆಮ್ಮನಹಳ್ಳಿಯ ದಲಿತ ದೇವತೆಗಳಾದ ಚಿಕ್ಕಮ್ಮದೇವಿ ಮತ್ತು ದೊಡ್ಡಮ್ಮದೇವಿಯವರ, ದೇವರ ಗುಡ್ಡರುಗಳಾದ ಕೆಂಪರಾಜು, ರವಿಕುಮಾರ್, ಚೌಡಯ್ಯ, ದಿನಕರ್, ಶ್ಯಾಮಪ್ರಸಾದ್, ಸನತ್‌ಕುಮಾರ್ ಹೆಚ್.ಪಿ ಯವರುಗಳು (ದಲಿತರು) ಸಮಯ ಸುಮಾರು 12 ಘಂಟೆಯಲ್ಲಿ ಹೆಬ್ಬಾರೆ(ಪ್ರಾಣಿ ಚರ್ಮದಿಂದ ತಯಾರಿಸಿದ ದೊಡ್ಡ ಡೋಲನ್ನು ಹೊಲುವ ಸಾಧನ) ಯನ್ನು ಭಾರಿಸುತ್ತಾ ಮೆರವಣಿಗೆ ಮೂಲಕ ಚೌಡೇಶ್ವರಿ ದೇವಾಲಯದ ಮುಂಭಾಗ ಬಂದಿದ್ದಾರೆ. ನಂತರ ಹೆಬ್ಬಾರೆಯ ಕಲ್ಲುಗಳಿಗೆ ಹೆಬ್ಬಾರೆಗಳನ್ನು ಕಟ್ಟಿ, ದೇವಾಲಯದ ಗರ್ಭಗುಡಿಗೆ ಮಣ್ಣಿನಿಂದ ಕಟ್ಟಿದ ದ್ವಾರವನ್ನು ಹೊಡೆದು ತೆರೆಯುವಾಗ ಹೆಬ್ಬಾರೆಗಳನ್ನು ಜೋರಾಗಿ ಭಾರಿಸುವುದು ಇವರ ಪದ್ದತಿಯಾಗಿದ್ದು, ಅದರಂತೆ ಗೋಡೆಯನ್ನು ಹೊಡೆಯುವಾಗ ತಮ್ಮ ದೇವರ ಕಾರ್ಯವನ್ನು ಮುಗಿಸಿದ್ದಾರೆ. ತದನಂತರ ಕೆಂಪರಾಜುರವರು ದೇವಾಲಯದ ಗರ್ಭಗುಡಿ ಬಳಿ ಹೋಗಿ ಪತಿತ್ರವೆಂದು ಭಾವಿಸಿರುವ ದ್ವಾರದ ಮಣ್ಣನ್ನು ಪೂಜಾರಿಯ ಬಳಿ ಕೇಳಿದ್ದಾರೆ. ಅಂತಹ ಸಮಯದಲ್ಲಿ ಪಕ್ಕದಲ್ಲೇ ಇದ್ದ ಚಂದ್ರಶೇಖರ್ ಮತ್ತು ಜಯಶಂಕರ್‌ರವರ ಕುಮ್ಮಕ್ಕಿನಿಂದ ಸವರ್ಣೀಯರಾದ ಪೂರ್ಣಚಂದ್ರ ಎಂಬುವವನು ನೀನ್ಯಾವನೋ ದೇವಾಲಯದ ಗರ್ಭಗುಡಿಯ ಹತ್ತಿರ ಬರುವುದಕ್ಕೆ, ಸೂಳೆಮಗನೆ, ಹೊಲೆಯ ಬಡ್ಡಿಮಗನೆ, ಇನ್ನೂ ಹಲವಾರು ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿ ಏಕಾ ಏಕಿ ಕೆಂಪರಾಜು ರವರಿಗೆ ಕಾಲಿನಿಂದ ಹೊದ್ದು ಕೆಳಗೆ ಬಿಳಿಸಿ, ಆತನ ಮರ್ಮಾಂಗಕ್ಕೆ ಬಲವಾಗಿ ಕಾಲಿನಿಂದ ಹೊದ್ದಮೇಲೆ , ಆತ ಸ್ಥಳದಲ್ಲೆ ಜ್ಞಾನ ತಪ್ಪಿ ಬಿದ್ದಿದ್ದಾನೆ, ಆದರೆ ಸ್ಥಳದಲ್ಲಿದ್ದ ಯಾವುದೇ ಪೊಲೀಸ್ ಅಧಿಕಾರಿಗಳು ಚಂದ್ರಶೇಖರವರ ಮೇಲಾಗಲಿ ಅಥವಾ ಪೂರ್ಣಚಂದ್ರರವರ ಮೇಲಾಗಲಿ ಯಾವುದೇ ಕ್ರಮತೆಗೆದುಕೊಳ್ಳದೆ ಬಲಿಪಶುವಾದ

ಕೆಂಪರಾಜುರವರನ್ನು ದೇವಾಲಯದ ಹೊರಗಡೆ ಎತ್ತುಕೊಂಡಿ ಹೋಗಿ, ಇಲ್ಲ ಅಂದ್ರೆ ನಾವೇ ಎತ್ತಿ ಬಿಸಾಕುತ್ತೇವೆ ಎಂದು, ಇತರ ದೇವರಗುಡ್ಡರುಗಳಿಗೆ ಬೆದರಿಕೆ ಹಾಕಿದ್ದಾರೆ. ತದನಂತರ ದಲಿತ ಜನಾಂಗದವರು ಕೆಂಪರಾಜುನನ್ನು ಮದ್ದೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಿದ್ದಾರೆ, ಆದರೆ ಹೆಚ್ಚಿನ ಚಿಕಿತ್ಸೆ ಅಗತ್ಯವಾಗಿರುವ ಕಾರಣ, ಮಂಡ್ಯ ಆಸ್ಪತ್ರೆಗೆ ಸೇರಿಸಲು ವೈದ್ಯರು ಸಲಹೆ ನೀಡಿದ ಹಿನ್ನೆಯಲ್ಲಿ ಆತನನ್ನು ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದಾರೆ.

**ಗ್ರಾಮದ ಜನರನ್ನುಸಂದರ್ಶಿಸಿ ಪಡೆದುಕೊಂಡ ಹೇಳಿಕೆಗಳು :**

**ಕೃಷ್ಣಪ್ಪ :** ಇವರ ಪ್ರಕಾರ ಸದರಿ ಗ್ರಾಮದಲ್ಲಿ ಸುಮಾರು ಶೇಕಾಡ 45–50 ರಷ್ಟು ವಿದ್ಯಾವಂತರಿದ್ದಾರೆ. ಆದರೆ ಅವರಿಗೆ ಸಂಪ್ರದಾಯಬದ್ದವಾಗಿ ನಡೆಯುವ ಆಚರಣೆಗಳನ್ನು ಮತ್ತು ವಿಧಿವಿಧಾನಗಳನ್ನು ಒಪ್ಪಿಕೊಳ್ಳದೆ ಈ ರೀತಿಯಾಗಿ ಗಲಾಟೆಗಳನ್ನು ಸೃಷ್ಠಿ ಮಾಡುತ್ತಿದ್ದಾರೆ. ಚಿಕ್ಕಯ ಎಂಬ ನಿವೃತ್ತಿ ಹೊಂದಿರುವ ಇಂಜಿನೀಯರ್ ರವರು ವಿದ್ಯಾವಂತ ಯುವಕರಿಗೆ ಮಾರ್ಗದರ್ಶಕರಾಗಿದ್ದಾರೆ, ಅವರು ಸುಮ್ಮನಾದರೆ ನಮ್ಮ ಗ್ರಾಮ ಶಾಂತಿಯಿಂದ ಇರುತ್ತದೆ. ನಮ್ಮನ್ನು ಯಾವುದೇ ಸವರ್ಣಿಯರು ದೇವಾಲಯದ ಒಳಗೆ ಬರಬೇಡ ಎಂದು ಹೇಳುವುದಿಲ್ಲ, ಆದರೆ ನಾವೇ ನಮ್ಮ ಸ್ಥಾನವನ್ನು ಅರಿತುಕೊಂಡು ದೇವಾಲಯದ ಒಳಗೆ ಹೋಗುವುದಿಲ್ಲ ಇದರಲ್ಲಿ ಸವರ್ಣಿಯರ ತಪ್ಪೇನಿಲ್ಲ. ನಮ್ಮ ಗ್ರಾಮ ಶಾಂತಿ ಇಂದ ಇರಬೇಕಾದರೆ ವಿದ್ಯಾವಂತ ದಲಿತ ಯುವಕರು ಸುಮ್ಮನಿರಬೇಕು. ನಮ್ಮವರು ವಿದ್ಯಾವಂತರಾದಷ್ಟು ಜಗಳಗಳು ಪ್ರಾರಂಭವಾಗುತ್ತವೆ. ನಮ್ಮ ಊರಿನಲ್ಲಿ ವಿಶ್ವಕರ್ಮ, ಆಧಿಕರ್ನಾಟಕ, ಒಕ್ಕಲಿಗರು, ಬಲಿಜಿಗರು, ವೈಷ್ಣವರು, ಮಡಿವಾರರು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ. ಇಲ್ಲಿಯ ತನಕ ನಮ್ಮ ಗ್ರಾಮದಲ್ಲಿ ಜಾತಿಜಾತಿಗಳ ನಡುವೆ ಗಲಾಟೆಯಾಗಿರುವ ಯಾವುದೇ ಉದಾಹರಣೆಗಳು ಇಲ್ಲ. ಇದೇ ಮೊದಲ ಭಾರಿಗೆ ಈ ರೀತಿಯ ರಾಜಕೀಯ ಪ್ರೇರಿತ ಗಲಾಟೆ ಯಾಗಿರುವುದು ಎಂದು ತಿಳಿಸಿದರು.

**ಚಂದ್ರ ಶೇಖರ್ :** ಇವರ ಪ್ರಕಾರ ಕೆಂಪರಾಜುರವರು ದಾಖಲಿಸಿರುವ ಪ್ರಕರಣದಲ್ಲಿ ಎರಡನೇಯ ಆರೋಪಿಯಾಗಿದ್ದಾರೆ. ಇವರು ಮೂಲತಃ ಹೆಮ್ಮನಹಳ್ಳಿಯವರಾಗಿದ್ದು ಬೆಂಗಳೂರಿನಲ್ಲಿ ವಾಸವಾಗಿದ್ದು 2003 ರಲ್ಲಿ ಮತ್ತೆ ತಮ್ಮ ಸ್ವಗ್ರಾಮವಾದ ಹೆಮ್ಮನಹಳ್ಳಿಗೆ ಬಂದಿದ್ದಾರೆ. ಇವರೆ ಚೌಡೇಶ್ವರಿ ದೇವಾಲಯದ ಪ್ರಧಾನ ಪೂಜಾರಿ ವಂಶಸ್ಥರಾಗಿದ್ದಾರೆ, ಇವರು ಗ್ರಾಮಕ್ಕೆ ಹಿಂದುರಿಗಿ ಹೋದಾಗ ದೇವಾಲಯದ ಜೀರ್ಣೋದ್ದಾರಕಾಗಿ ಭಕ್ತಾದಿಗಳಿಂದ ದೇಣಿಗೆ ಪಡೆದು ಸುಮಾರು 1. ಕೋಟಿ ವೆಚ್ಚದಲ್ಲಿ ದೇವಾಲಯದ ಜೀಣೋದ್ದಾರ ಕಾರ್ಯಗಳನ್ನು ನೇರವೇಸಿ ದೇವಾಲಯದ ನಿರ್ಮಾಣ ಮಾಡಿದ್ದಾರೆ. ಈ ಪ್ರಕರಣದಲ್ಲಿ ಯಾವುದೇ ತಪ್ಪುಗಳು ನಮ್ಮ ಕಡೆಯಿಂದ ನಡೆದಿಲ್ಲ. ಅರ್ಕೇಶ್ವರಿ ದೇವಾಲಯದ ಆಸ್ತಿಯ ಮೇಲೆ ಕಣ್ಣಿಟ್ಟಿರುವ ಕೆಂಪೇಗೌಡ ವಂಶಸ್ಥರ ಕುತಂತ್ರವೆಂದಿದ್ದಾರೆ. ಈ ದೇವಾಲಯದಿಂದ ವರ್ಷಕ್ಕೆ ಸುಮಾರು 2 ಲಕ್ಷ ಆದಾಯ ಬರುತ್ತದೆ. ದೇವಾಲಯದ ಟ್ರಸ್ಟಿ, ದೇವಾಲಯದ ಎಲ್ಲಾ ವ್ಯಾವರಹಾರಗಳನ್ನು ನಿರ್ವಹಿಸುತ್ತದೆ. ನಾವು ಇದಕ್ಕೆ ಸಂಪೂರ್ಣ ಸಹಕಾರ ನೀಡುತ್ತೇವೆ. ನಮ್ಮ ಗ್ರಾಮ ಶಾಂತಿಯಿಂದ ಇದೆ. ನಾವು ದಲಿತರನ್ನು ದೇವಾಲಯಕ್ಕೆ ಪ್ರವೇಶ ಮಾಡಬಾರದು ಎಂದು ಹೇಳಿಲ್ಲ. ಕೆಂಪರಾಜು ರವರೇ ಅ ದಿನ ದೇವಾಲಯದ ಗರ್ಭಗುಡಿಯನ್ನು ಪ್ರವೇಶ ಮಾಡಿದ್ದಾರೆ, ಹಾಗಾಗಿ ಸಣ್ಣ ಪುಟ್ಟ ಗಲಾಟೆಗಳು ಆಗಿದ್ದವೆ. ಏಕೆಂದರೆ ಯಾವುದೆ ಜನಾಂಗದವರು ಗರ್ಭಗುಡಿಯನ್ನು ಪ್ರವೇಶ ಮಾಡುವ ಆಗಿಲ್ಲ, ಹಾಗಾಗಿ ಕೆಂಪರಾಜುರವರು ಆದಿನ ತಪ್ಪು ಮಾಡಿದ್ದಾರೆ. ನಾವು ಯಾರನ್ನು ದೇವಾಲಯದ ಒಳಗೆ ಬರಬಾರದು ಎಂದು ಹೇಳಿಲ್ಲ. ಆದರೂ ದಲಿರೇ ದೇವಾಲಯದ ಒಳಗಡೆ ಬರುವುದಿಲ್ಲ. ಇದು ನಮ್ಮ ತಪ್ಪಲ್ಲ. ಈಗ ನಾವೇ ಕೆಂಪರಾಜುರವರ ಜೊತೆ ಮಾತನಾಡಲು

ಸಿದ್ದರಿದ್ದು ಪ್ರಕರಣ ಇತ್ಯಾರ್ಥಮಾಡಿಕೊಳ್ಳಲ ತಯಾರಿದ್ದೇವೆ ಎಂದು ತಿಳಿಸಿದರು. ಅಲ್ಲದೆ **ಗ್ರಾಮ ಪಂಚಾಯಿತಿಯ ಅಧ್ಯಕ್ಷರು** ಸಹ ಚಂದ್ರಶೇಖರವರು ನೀಡಿದ ಮಾಹಿತಿಗಳೆಲ್ಲವು ಸತ್ಯವಾಗಿದ್ದು ಈ ಗಲಾಟೆ ರಾಜಕೀಯ ಪ್ರೇರಿತವಾದದ್ದು ಮತ್ತು ಅರ್ಕೇಶ್ವರ ದೇವಾಲಯದ ಆಸ್ತಿಯ ಮೇಲೆ ಕಣ್ಣಿಟ್ಟಿರುವ ಕೆಂಪೆಗೌಡ ವಂಶಸ್ಥರ ಸಂಚಿನಿಂದಾದ ಘಟನೆ ಎಂದಿದ್ದಾರೆ.

**ಶಂಕರ್ : ವಕೀಲರು,** ಇವರ ಪ್ರಕಾರ ಈ ಪ್ರಕರಣದ ರುವಾರಿ ಚಂದ್ರಶೇಖರವರಾಗಿದ್ದು ಇದಕ್ಕೆ ಅವರೆ ಹೊಣೆಗಾರರಾಗಿದ್ದಾರೆ. ಇವರು ದೇವಾಲಯದ ಹುಂಡಿ ಹಣ ಮತ್ತು ದೇಣಿಗೆಯನ್ನು ಪಡೆದು ಸಾರ್ವಜನಿಕರನ್ನು ವಂಚಿಸುತ್ತಿದ್ದಾರೆ. ಮತ್ತು ಇವರು ರಾಜಕೀಯವಾಗಿ ಪ್ರಭಾವ ಇರುವಂತಯ ವ್ಯಕ್ತಿಯಾಗಿದ್ದು ಕೆಂಪರಾಜುರವರ ಮೇಲೆ ಪೊಲೀಸ್‌ರ ಮುಖಾಂತರ  ಸುಳ್ಳು ಪ್ರಕರಣವನ್ನು ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದಾರೆ. ಇದು ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಯಾವ ರೀತಿಯಲ್ಲಿ ಜೀವಂತವಾಗಿದೆ ಎಂಬುವುದಕ್ಕೆ ಜೀವಂತ ಸಾಕ್ಷಿ ಯಾಗಿದೆ. ಕಳೆದ ವರ್ಷ ಸಹ ಜಾತ್ರ ಮಹೋತ್ಸವದಲ್ಲಿ ಗಲಾಟೆಯಾಗಿದ್ದು ಪೊಲೀಸ್ ಲಾಟಿ ಜಾರ್ಜ್ ಸಹ ಆಗಿತ್ತು ಹಾಗಾಗಿ ನಾವುಗಳು (ದಲಿತರು) ತಹಸೀಲ್ದಾರ್, ಡಿವೈ.ಎಸ್.ಪಿ ಮತ್ತು ಪೊಲೀಸ್ ಸರ್ಕಲ್ ಇನ್ಸಪೆಕ್ಟರ್ ರವರಿಗೆ ಜಾತ್ರಾಮಹೋತ್ಸವ ಇರುವ ಒಂದು ವಾರಗಳ ಹಿಂದೆಯೇ ರಕ್ಷಣೆಕೋರಿ ಮನವಿ ಸಲ್ಲಿಸಿದ್ದೇವು, ಆದರೂ ಇವರುಗಳು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸದೇ ಈ ಜಾತಿ ದೌರ್ಜನ್ಯಕ್ಕೆ ಮೂಲ ಕಾರಣ ರಾಗಿದ್ದಾರೆ ಎಂದು ತಿಳಿಸಿದರು.

**ಮಂಡ್ಯ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗಳು :** ನಾವು ಇವರನ್ನು ಭೇಟಿ ಮಾಡಿ ಸದರಿ ಘಟನೆಯ ಬಗ್ಗೆ ವಿಚಾರಿಸಿದಾಗ,  ಇದು ದಲಿತರ ಮೇಲೆ ನಡೆದ  ದೌರ್ಜನ್ಯವಲ್ಲ, ಇದು ಎರಡು ಸವರ್ಣಿಯರ ಗುಂಪುಗಳ ನಡುವೆ ದೇವಾಲಯದ ಮಾಲಿಕತ್ವಕ್ಕಾಗಿ ನಡೆಯುತ್ತಿರುವ  ಜಗಳವಾಗಿದೆ. ನಾವು ಈಗಾಗಲೇ ಕೆಂಪರಾಜುರವರು  ನೀಡಿರುವ ದೂರನ್ನು ಆಧಾರಿಸಿ ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆಯ  ಕಲಂ 323, 114ರ ಜೊತೆ 34 ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಕಲಂ 3(1)(10) ರ ಅಡಿ ಮೊಹರು ಸಂಖ್ಯೆ: 38/2012 ರಲ್ಲಿ ಪೂರ್ಣಚಂದ್ರ, ಚಂದ್ರಶೇಖರ್ ಮತ್ತು ಜಯಶಂಕರರವರುಗಳ ವಿರುದ್ದ ಪ್ರಕರಣ ದಾಖಲಿಸಿದ್ದೇವೆ. ಮುಂದಿನ ಸೂಕ್ತ ತನಿಖೆಯನ್ನು ಕೈಗೊಂಡು ಕ್ರಮಕ್ಕೈಗೊಳ್ಳುವಂತೆ ಮಳವಳ್ಳಿ ಡಿ.ವೈ.ಎಸ್.ಪಿ ಯವರಿಗೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

ನಮ್ಮ ತಂಡದವರು  ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ, ನಿಮ್ಮ ಅಧಿಕಾರಿಗಳು ಈ ಪ್ರಕರಣದ ಬಲಿಪಶುವಾದ ಕೆಂಪರಾಜುರವರ ಮೇಲೆ ತಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದಾರೆ ಎಂಬ ಆರೋಪದಡಿ ಸದರಿ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆಯ ಕಲಂ 353 ರ ಅಡಿ ಮೊಹರು ಸಂಖ್ಯೆ 39/2012 ರಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದು ಕೇಳಿದ ಪ್ರಶ್ನೆಗೆ, ನಾನೇ ದಿನಾಂಕ: 16/3/2012 ರಂದು ಆತನ ಮೇಲೆ ಪ್ರಕರಣ ದಾಖಲು ಮಾಡಲು ನಿರ್ದೇಶನ ನೀಡಿದ್ದೇನೆ ಏಕೆಂದರೆ ಕರ್ತವ್ಯದ ಮೇಲೆ ನಿರತರಾಗಿದ್ದ ಸದರಿ ಪೊಲೀಸ್ ಠಾಣೆಯ ಸಬ್ ಇನ್ಸಪೆಕ್ಟರ್ ರವಗೆ ಪೆಂಜಿನಿಂದ  ( ಒಂದು ಬಟ್ಟೆಯನ್ನು ಕಡ್ಡಿಗೆ ಸುತ್ತು ಅದಕ್ಕೆ ಸೀಮೆಣ್ಣೆ ಅಥವಾ ಇತರೆ ಎಣ್ಣೆಯನ್ನು ಹಾಕಿ ಉರಿಸುತ್ತಾರೆ) ಬೆಂಕಿ ತಗುಲಿ ಗಾಯಗಳಾಗಿವೆ ಎಂದು ತಿಳಿಸಿದರು. ಅದಕ್ಕೆ ನಾವು ಏಕೆ ಒಂದು ದಿನ ತಡವಾಗಿ ಕೆಂಪರಾಜುರವರ ಮೇಲೆ ದೂರು ದಾಖಲಿಸುವಂತೆ ತಾವು ನಿರ್ದೇಶನ ನೀಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ, ದೂರನ್ನು ಘಟನೆ ನಡೆದ 2 ತಿಂಗಳ ಮೇಲಾದರು ಕೊಡಬಹುದು ಅದಕ್ಕೆ ಕಾನೂನಿನಲ್ಲಿ ಅಡ್ಡಿಯಿಲ್ಲ ಎಂಬ ಉತ್ತರವನ್ನು

ನೀಡಿದ್ದಾರೆ. ಮತ್ತೆ ನಮ್ಮ ತಂಡದವರು, ಸದರಿ ಗ್ರಾಮಸ್ಥರು ನೀವೆ ಆರೋಪಿಗಳನ್ನು ರಕ್ಷಿಸುವುದಕ್ಕಾಗಿ ಕೆಂಪರಾಜುರವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ಆರೋಪಿಸಿದ್ದಾರೆ ಎಂದು ಕೇಳಿದ್ದಕ್ಕೆ, ಇದು ಸುಳ್ಳು ಎಂದು ಅಲ್ಲೆಗಳೆದರು, ಅಲ್ಲದೆ ಕಳೆದ ವರ್ಷ ಮಂಡ್ಯ ಜಿಲ್ಲೆಯಲ್ಲಿ ಸುಮಾರು 100 ದಲಿತ ದೌರ್ಜನ್ಯ ಪ್ರಕರಣಗಳು ದಾಖಲಾಗಿದ್ದವು, ಅವುಗಳಲ್ಲಿ 20 ಸುಳ್ಳು ಕೇಸುಗಳಾಗಿದ್ದು ಆ ಕೇಸುಗಳಲ್ಲಿ ನ್ಯಾಯಾಲಯಕ್ಕೆ 'ಬಿ' ವರದಿಯನ್ನು ಸಲ್ಲಿಸಲಾಗಿದೆ. ಹಾಗಾಗಿ ಈ ಪ್ರಕರಣದ ತನಿಖೆ ನಡೆಯುತ್ತಿದೆ ನಂತರ ಈ ಪ್ರಕರಣ ಸಂಪೂರ್ಣ ಮಾಹಿತಿ ಲಭ್ಯವಾಗುತ್ತದೆ ಎಂದು ಉತ್ತರವನ್ನು ನೀಡಿದ್ದಾರೆ.

**ಜಿಲ್ಲಾಧಿಕಾರಿ :** ಜಿಲ್ಲಾಧಿಕಾರಿಯವರು ಈ ಘಟನೆ ನಡೆದ ಮೇಲೆ ಪ್ರಕರಣದ ಪರಿಶೀಲನೆಗಾಗಿ ಸ್ಥಳಕ್ಕೆ ಭೇಟಿ ನೀಡಿರಲಿಲ್ಲ, ಆದರೂ ಪ್ರಕರಣದ ಬಗ್ಗೆ ಮಾಹಿತಿ ತಿಳಿದಿದೆ ಎಂದು ತಿಳಿಸಿದ್ದಾರೆ. ಆದರೆ ಪ್ರಕರಣದ ಬಗ್ಗೆ ನಾನು ಯಾವುದೇ ಕ್ರಮ ಜರುಗಿಸಿಲ್ಲ ಮದ್ದೂರು ತಾಲ್ಲೂಕಿನ ತಹಸೀಲ್ದಾರವರು ನೋಡಿಕೊಳ್ಳುತ್ತಾರೆ ಎಂದು ತಿಳಿಸಿದರು. ನಾನು ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ದೊರೆತ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು. ನಂತರ ತರಾತುರಿಯಲ್ಲಿ ಹೋರಟು ಹೋದರು.

**ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ :** ಇವರು ಮಂಡ್ಯ ಜಿಲ್ಲಾ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕೆಂಪರಾಜುರವರನ್ನು ಭೇಟಿ ಮಾಡಿ ಚಿಕಿತ್ಸೆ ಬಗ್ಗೆ ವಿಚಾರಿಸಿದ್ದಾರೆ ಹಾಗೂ ಚಿಕಿತ್ಸೆ ನೀಡುತ್ತಿದ್ದ ವೈದ್ಯರ ಬಳಿ ವರದಿಯನ್ನು ಪಡೆದಿದ್ದು, ಅದರ ಪ್ರಕಾರ ಕೆಂಪರಾಜುರವರಿಗೆ ಆಗಿರುವಂತಹ ಗಾಯಗಳು ಸಾಮನ್ಯ ಸ್ವರೂಪದವುಗಳಾಗಿದ್ದವೆ ಎಂಬ ಮಾಹಿತಿ ನಮಗೆ ಬಂದಿದೆ ಎಂದು ತಿಳಿಸಿದರು. ಮುಂದುವರಿದು ನಮ್ಮ ಜಿಲ್ಲೆಯಲ್ಲಿ ಈ ರೀತಿಯ ಘಟನೆಗಳು ನಡೆಯುತ್ತಿದ್ದು ಅಸ್ಪಶ್ಯತೆ ನಿವಾರಣೆಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಅಸ್ಪಶ್ಯತೆ ಆಚರಣೆ ಇನ್ನೂ ಜೀವಂತ ಇರುವ ಬಗ್ಗೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮುಂದಿನ ಕ್ರಮಗಳ ಬಗ್ಗೆ ಚರ್ಚಿಸುವುದಾಗಿ ನಮಗೆ ತಿಳಿಸಿದರು.

**ನಾವು ಗಮನಿಸಿದಂತಹ ಅಂಶಗಳು :**

1. ಜಾತ್ರಾಮಹೋತ್ಸವ ಮುನ್ನವೆ ದಲಿತರು ತಹಸೀಲ್ದಾರ್, ಡಿವೈಎಸ್‌ಪಿ, ಮತ್ತು ವೃತ್ತ ಆರಕ್ಷಕ ನಿರೀಕ್ಷರಿಗೆ ಹಬ್ಬದ ದಿನದಂದು ಸೂಕ್ತ ರಕ್ಷಣೆ ಕೋರಿ ಅರ್ಜಿ ಸಲ್ಲಿಸಿದ್ದರೂ ಈ ಘಟನೆ ನಡೆದಿರುವುಕ್ಕೆ ಜಿಲ್ಲಾಡಳಿತದ ನಿರ್ಲಕ್ಷ್ಯತೆಯೇ ಕಾರಣ ಎಂಬುವುದು ಮೇಲು ನೋಟಕ್ಕೆ ಕಂಡು ಬರುತ್ತದೆ.
2. ದೇವಾಲಯದ ಆದಾಯ ಹೆಚ್ಚಾದಂತೆ ದಲಿತರನ್ನು ದೇವಾಲಯದ ವ್ಯಾವಹಾರಗಳಿಂದ ದೂರ ಇಡಲಾಗುತ್ತಿದೆ ಎಂಬುವುದು ಸಾರ್ವಜನಿಕರ ಹೇಳಿಕೆಗಳಿಂದ ತಿಳಿದು ಬಂದಿದೆ.
3. ದೇವಾಲಯದ ಗರ್ಭಗುಡಿಗೆ ಪೂಜಾರಿಯನ್ನು ಹೊರತು ಪಡಿಸಿ ಯಾವ ಜಾತಿಯವರು ಹೋಗುವಂತಿಲ್ಲ ಎಂಬ ಪದ್ದತಿ ಇದೆ ಎಂದು ಹೇಳಿಕೆ ನೀಡಿರುವ ಚಂದ್ರಶೇಕರ್‌ರವರು, ಏಕೆ ತಾವೇ ಮತ್ತು ಪ್ರಕರಣದ ಇತರೆ ಆರೋಪಿಗಳಾದ ಪೂರ್ಣಚಂದ್ರ ಮತ್ತು ಜಯಶಂಕರರವರು ಒಳಗೆ ಹೋಗಿದ್ದರು? ಮತ್ತು ಏಕೆ ಇವರನ್ನು ಬೇರೆ ಜನಗಳು ಗರ್ಭಗುಡಿಗೆ ಹೋಗಬಾರದು ಎಂದು ಅಡ್ಡಿ ಪಡಿಸಲಿಲ್ಲ? ಎಂಬ ಸಾಮಾನ್ಯ ಪ್ರಶ್ನೆ ಜನಸಾಮಾನ್ಯರಲ್ಲಿ ಬರುವುದು ಸಹಜ ಆದರೆ ಇದರಿಂದ ಅರ್ಥಮಾಡಿಕೊಳ್ಳಬೇಕಾದ ಸತ್ಯ ಏನೆಂದರೆ ಸವರ್ಣಿಯರಿಗೆ ದೇವಾಲಯದ ಪ್ರವೇಶ ಮುಕ್ತವಾಗಿರುತ್ತದೆ. ಆದರೆ ಕೆಂಪರಾಜು ದಲಿತನಾಗಿದ್ದಾನೆಂಬ

ಕಾರಣದಿಂದಲ್ಲೇ ಅವನಿಗೆ ಗರ್ಭಗುಡಿಯ ಪ್ರವೇಶವನ್ನು ನಿರಾಕರಿಸಿ ಅವನ ಮೇಲೆ ಹಲ್ಲೆಯಾಗಿದೆ ಎಂಬುವುದು ಮೇಲುನೋಟಕ್ಕೆ ಕಂಡು ಬರುತ್ತದೆ.

4. ಕೆಂಪರಾಜುರವರು ನೀಡಿರುವ ಪ್ರಕಣವನ್ನು ಕೆಸ್ತೂರು ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರವರಾದ ಎ.ಸಿ. ಲೋಕೇಶ್ ರವರು ಘಟನೆ ನಡೆದ ದಿನದಂದೆ ಅಂದರೆ ದಿನಾಂಕ : 15/3/2012 ಸಮಯ ಸಾಯಂಕಾಲ 4.30 ರಲ್ಲಿ ಮೊಹರು ಸಂಖ್ಯೆ 38/12 ರಲ್ಲಿ ಆರೋಪಿಗಳ ವಿರುದ್ದ ಪ್ರಕರಣ ದಾಖಲು ಮಾಡಿದ್ದಾರೆ ಮತ್ತು ಎಫ್‌.ಐ.ಆರ್ ಪ್ರತಿಯಲ್ಲಿ ಅವರ ಸಹಿಯನ್ನು ದಾಖಲಿಸಿದ್ದಾರೆ ಹಾಗೂ ಸದರಿ ಪೊಲೀಸ್ ಸಬ್ ಇನ್ಸಪೇಕ್ಟರವರು ದಿನಾಂಕ 16/3/2012 ಸಮಯ ಮುಂಜಾನೆ 8.30 ರಲ್ಲಿ ಕೆಂಪರಾಜುರವರ ಮೇಲೆ ದಿನಾಂಕ : 15/3/2012 ರ ಸಮಯ ಮಧ್ಯಾಹ್ನ 12 ಘಂಟೆ ಯಲ್ಲಿ ತಮ್ಮ ಸಾರ್ವಜನಿಕ ಕರ್ತವ್ಯಕ್ಕೆ ತೊಂದರೆ ಮಾಡಿದ್ದಾರೆ ಎಂಬ ಆರೋಪದಡಿಯಲ್ಲಿ ಠಾಣೆಯ ಮೊಹರು ಸಂಖ್ಯೆ 39/12 ರಲ್ಲಿ ಸ್ವಯಂ ದೂರು ದಾಖಲಿಸಿದ್ದಾರೆ ಹಾಗೂ ಎಫ್‌.ಐ.ಆರ್ ಪ್ರತಿಯ ಕಲಂ. 3(ಸಿ) ಯಲ್ಲಿ ಬಂದೋಬಸ್ತು ಕರ್ತವ್ಯದಲ್ಲಿದ್ದುದರಿಂದ ದೂರು ದಾಖಲಿಸಲು ತಡವಾಗಿದೆ ಎಂಬ ಕಾರಣವನ್ನು ತಿಳಿಸಿದ್ದಾರೆ. ಆದರೆ ಇದೇ ಅಧಿಕಾರಿ ದಿನಾಂಕ 15/3/12 ರಂದು ಕೆಂಪರಾಜು ರವರು ನೀಡಿರುವ ಪ್ರಕರಣವನ್ನು ದಾಖಲು ಮಾಡಲು ಸಮಯ ಅವಕಾಶವಿದ್ದುದ್ದಾದರೆ, ಇವರಿಗೆ ತೊಂದರೆ ನೀಡಿರುವ ಕೆಂಪರಾಜು ರವರ ಮೇಲೆ ಅದೇ ದಿನ ದೂರು ದಾಖಲು ಮಾಡಲು ಸಮಯಾವಕಾಶ ವಿರಲಿಲ್ಲವೇ? ಎಂಬ ಪ್ರಶ್ನೆ ಸಾಮನ್ಯರಲ್ಲೂ ಉದ್ಭವವಾಗುತ್ತದೆ. ಕೆಂಪರಾಜುರವರ ಮೇಲೆ ದೂರು ದಾಖಲು ಮಾಡುವುದಕ್ಕಾಗಿ ಸುಳ್ಳು ಕಾರಣ ನೀಡಿ ಮಾರನೇಯ ದಿನ ದೂರು ದಾಖಲು ಮಾಡಿರುವುದು, ಮೇಲು ನೋಟಕ್ಕೆ ಯಾವುದೋ ಪ್ರಭಾವಕ್ಕೊಳಗಾಗಿ ಸುಳ್ಳು ಪ್ರಕರಣ ದಾಖಲಿಸಿರುವುದು ಕಂಡುಬರುತ್ತದೆ.

5. ಈ ಗ್ರಾಮದಲ್ಲಿ ಅಸ್ಪೃಶ್ಯತೆಯನ್ನು ಸಂಪ್ರದಾಯಬದ್ದವಾದ ಆಚರಣೆಯಾಗಿ ದಲಿತರು ಅನುಸರಿಸಲು ಸವರ್ಣಿಯರ ಪ್ರಭಾವ ಇರುವುದು ಮೇಲು ನೋಟಕ್ಕೆ ಕಂಡುಬರುತ್ತದೆ.

6. ಕೆಂಪರಾಜುರವರು ವಿದ್ಯಾವಂತ ದಲಿತ ಯುವಕರಾಗಿವುದುದರಿಂದ ಅಸ್ಪೃಶ್ಯತೆಯ ವಿರುದ್ಧ ಮಾತಾನಾಡಿ ದೇವಾಲಯದ ಒಳಗೆ ಪ್ರವೇಶಕೇಳಿದ್ದರಿಂದ, ಸದರಿ ದಲಿತ ದೌರ್ಜನ್ಯ ಘಟನೆ ನಡೆದಿರುವುದು ಮೇಲು ನೋಟಕ್ಕೆ ಕಂಡುಬರುತ್ತದೆ ಎಂಬುವುದು ಮೊದಲನೇಯ ಆರೋಪಿ ಚಂದ್ರಶೇಖರವರ ಮಾತಿನಿಂದಲೇ ತಿಳಿದು ಬರುತ್ತದೆ.

7. ಚೌಡೇಶ್ವರಿಯಮ್ಮನವರ ಒಕ್ಕಲಿನವರು ಸವರ್ಣಿಯರಲ್ಲೂ ಮತ್ತು ದಲಿತರಲ್ಲೂ ಇದ್ದು ಸದರಿ ಪ್ರಕರಣದಲ್ಲಿ ಸದರಿ ಒಕ್ಕಲಿನ ಸವರ್ಣಿಯರು ದಲಿತರಿಗೆ ಬೆಂಬಲನೀಡಿರುವುದು ಕಂಡುಬರುತ್ತದೆ. ಮತ್ತು ಸದರಿಯವರು ಅನ್ಯೋನ್ಯವಾಗಿರುವುದು ಸಹ ಕಂಡುಬರುತ್ತದೆ.

8. ಚೌಡೇಶ್ವರಿ ದೇವಾಲಯದಿಂದ ಬರುವ ಆದಾಯವನ್ನು ಐದು ವರ್ಷಗಳ ಹಿಂದೆ ಸಾರ್ವಜನಿಕವಾಗಿ ಲೆಕ್ಕ ಹಾಕಲಾಗುತ್ತಿತ್ತು ಆದರೆ ಟ್ರಸ್ಟ್ ರಚನೆಯಾದ ಮೇಲೆ ದೇವಾಲಯಕ್ಕೆ ಬರುವ ಯಾವುದೇ ಆದಾಯವನ್ನು ಸಾರ್ವಜನಿಕವಾಗಿ ಲೆಕ್ಕ ಹಾಕಲಾಗುತ್ತಿಲ್ಲ ಎಂಬುವುದು ಸಾರ್ವಜನಿಕರ ಹೇಳಿಕೆಯಿಂದ ವೇದ್ಯಗೊಂಡಿದೆ. ಮತ್ತು ಚೌಡೇಶ್ವರಿ ದೇವತೆಯ ವಕ್ಕಲಿನವರನ್ನು ದೇವಾಲಯದ ವ್ಯವಹಾರಗಳಿಂದ ದೂರ ಇಡಲಾಗಿದೆ.

9. ಚೌಡೇಶ್ವರಿ ದೇವಾಲಯದ ಟ್ರಸ್ಟ್‌ನಲ್ಲಿ ಯಾವುದೇ ದಲಿತ ಚೌಡೇಶ್ವರಿ ಒಕ್ಕಲಿನವರನ್ನು ಸದಸ್ಯರನ್ನಾಗಿ ಮಾಡಿಕೊಂಡಿರುವುದಿಲ್ಲ.

10. ಈ ಪ್ರಕರಣದ ಆರೋಪಿಗಳು ನಿರೀಕ್ಷಣ ಜಾಮೀನು ಪಡೆದುಕೊಂಡಿದ್ದಾರೆ ಮತ್ತು ಗ್ರಾಮದಲ್ಲೆ ಇದ್ದಾರೆ.
11. ಈ ಪ್ರಕರಣದ ಬಲಿಪಶು ಕೆಂಪರಾಜುರವರು ಘಟನೆ ನಡೆದ ದಿನದಿಂದ ನಮ್ಮ ತಂಡ ಭೇಟಿ ಮಾಡಿದ ದಿನದವರೆವಿಗೂ ಗ್ರಾಮಕ್ಕೆ ಭೇಟಿ ನೀಡಿರುವುದಿಲ್ಲ. ಏಕೆ ಎಂದು ಗ್ರಾಮಸ್ಥರನ್ನು ವಿಚಾರಿಸಿದರೆ ಸವರ್ಣಿಯರ ಭಯ ಮತ್ತು ಪೊಲೀಸ್ ರವರು ಅವರು ವಿರುದ್ದ ಸುಳ್ಳು ಕೇಸು ಹಾಕಿರುವುದರಿಂದ ಅವರಿಗೆ ಭಯವಿದೆ ಎಂಬ ಮಾಹಿತಿಯನ್ನು ನೀಡಿದ್ದಾರೆ.
12. ಈ ಪ್ರಕರಣದ ಎರಡನೇಯ ಆರೋಪಿ ಸಂಸಾರ ಸಮೇತ ಚೌಡೇಶ್ವರಿ ದೇವಾಲಯದ ಆಸ್ತಿಯಲ್ಲೇ ವಾಸಿಸುತ್ತಿರುವುದು ಕಂಡುಬರುತ್ತದೆ. ಮತ್ತು ಈತ ಸದರಿ ಗ್ರಾಮ ಪಂಚಾಯಿತಿಯ ಸದಸ್ಯರು ಆಗಿರುವುದರಿಂದ ಇವರು ಒಬ್ಬ ರಾಜಕೀಯ ಪ್ರಭಾವ ಬೀರುವುದು ಮೇಲು ನೋಟಕ್ಕೆ ಕಂಡು ಬರುತ್ತದೆ.

**ನಮ್ಮ ಹಕ್ಕೋತ್ತಾಯಗಳು :**

1. ಪ್ರಕರಣದ ಬಗ್ಗೆ ಸೂಕ್ತ ತನಿಖೆ ನಡೆಯಬೇಕಾಗಿದೆ. ಏಕೆಂದರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಈ ಪ್ರಕರಣದಲ್ಲಿ ಪೂರ್ವಭಾವನೆ ಹೊಂದಿದವರಾಗಿದ್ದು ಇವರಿಂದ ತನಿಖಾಧಿಕಾರಿಗಳಿಗೆ ಸೂಕ್ತ ನಿರ್ಧೇಶನ ಸಿಗುವುದಿಲ್ಲ.
2. ಪ್ರಕರಣದ ಬಲಿಪಶುವಾದ ಕೆಂಪರಾಜು ರವರಿಗೆ ಸೂಕ್ತ ಪರಿಹಾರ ನೀಡಬೇಕು
3. ಪ್ರಕರಣದ ಬಗ್ಗೆ ಮಾಹಿತಿ ಗೊತ್ತಿದ್ದು, ಗ್ರಾಮದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳದೆ ಇರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ವಿರುದ್ದ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.
4. ಕೆಂಪರಾಜುರವರ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿರುವ ಅಧಿಕಾರಿಯ ವಿರುದ್ದ ಸೂಕ್ತ ಕಾನೂನು ಕ್ರಮಕ್ಕೈಗೊಳ್ಳಬೇಕು.
5. ಕೆಂಪರಾಜುರವರ ಮೇಲೆ ದಾಖಲು ಮಾಡಿರುವ ಸುಳ್ಳು ಪ್ರಕರಣವನ್ನು ಹಿಂಪಡೆಯಬೇಕು.
6. ಸದರಿ ಗ್ರಾಮದ ದಲಿತರಿಗೆ ಸೂಕ್ತ ರಕ್ಷಣೆಯನ್ನು ಒದಗಿಸ ಬೇಕು.